ಸರ್ಕಾರಕ್ಕೆ ಬರೆದಿದ್ದೇವೆ. ಆದ್ದರಿಂದ ಮಂತ್ರಿ ಸ್ಥಾನ ಹೋದ ಮೇಲೆ ಹೋರಾಟ ಮಾಡ್ತೀನಿ ಅಂತ ಹೇಳಲಿಲ್ಲ. ಮಂತ್ರಿಯಾಗಿದ್ದಾಗಲೂ ಹೋರಾಟ ಮಾಡುತ್ತೇವೆ ಅಂತ ಹೇಳಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ದಯಮಾಡಿ ಈಗಿರುವ ಮಂತ್ರಿಗಳಿಗೆ ಹೇಳಿ ಒಂದು ನಿರ್ಣಯ ತಂದುಬಿಡಿ ಅಂತ ಗೋಗರೆದಿದ್ದೇವೆ ಅಷ್ಟು ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಎನ್. ಚಿಕ್ಕೇಗೌಡ:- ಅದು ಸದನಕ್ಕೆ ಸಂಬಂಧಪಟ್ಟದ್ದುದು ನಾನು ಒಬ್ಬನೇ ಹೇಳುವುದಿಲ್ಲ. ಮಾನ್ಯ ಕೃಷಿ ಸಚಿವರು ಹೇಳಿದರು, ಇದರಲ್ಲಿ ಎರಡು ಇದೆ, ಈಗ ರೈತರಿಗೆ ಬೆಲೆ ಏರಿದ ಮೇಲೆ 17 ಕೋಟಿ ಕೊಟ್ಟಿರುವದು. 31-3-1993ವರೆಗೆ ಅಂತ ನಾನು ತಿಳಿದಿರೋದು ಮತ್ತೆ ಸಣ್ಣ ರೈತರು ಮತ್ತು ಮಧ್ಯಮ ವರ್ಗದ ರೈತರಿಗೆಂದು ಕೊಟ್ಟಿರುವ 36 ಕೋಟಿ ಸಬ್ಸಿಡಿ 31-12-1993 ವರೆಗೆ ಅಂತ ನನಗೆ ತಿಳಿದಿರುವ ಮಾಹಿತಿ ಈಗ ನಮ್ಮ ಮಂತ್ರಿಗಳು ಕನ್‌ಫ್ಯೂಸ್ ಮಾಡಿ ಹೇಳುತ್ತಾ ಇದ್ದಾರೆ. ಆದರೂ ಗೊಬ್ಬರ ಹೆಚ್ಚು ಬಳಕೆಯಾಗಿಲ್ಲ. ಸಬ್ಸಿಡಿ ಕೊಟ್ಟಿರುವುದು ಮಾತ್ರ ಖರ್ಚಾಗಿದೆ. ಯಾವಾಗ ಬಳಕೆ ಹೆಚ್ಚಾಗಿಲ್ಲ, ಉತ್ಪನ್ನ ಕಡಿಮೆಯಾಗುತ್ತದೆ ಎನ್ನುವಂಥಾದ್ದು ಸ್ಪಷ್ಟವಾದಂಥದ್ದು. ಹಿಂದೆ ನಮ್ಮ ಶ್ರೀಯುತ ಬಂಗಾರಪ್ಪನವರ ಸರ್ಕಾರ ಇದ್ದಾಗ ಶೇಕಡ 25ರಷ್ಟು ಉತ್ಪನ್ನ ಖೋತಾ ಆಗುತ್ತದೆ ಎಂದು ಸ್ಪಷ್ಟವಾಗಿ ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಮಾನ್ಯ ಕೃಷಿ ಮಂತ್ರಿಗಳು ಅದರ ಬಗ್ಗೆ ಏನು ಮಾಹಿತಿಯನ್ನು ಕೊಡುತ್ತಾರೆ ಎಂದು ತಿಳಿಯಬಯಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಮಾನ್ಯ ಅಧ್ಯಕ್ಷರೇ, ನಾನಾ ವಿಧವಾಗಿ ಕಾರ್ಯಕ್ರಮಗಳನ್ನು ಕೈಗೊಂಡಾಗ ಆಗದೇ ಇರಬಹುದು. ಏಕೆಂದರೆ ಖರ್ಚು ಮಾಡುವುದಕ್ಕೆ ಅನೇಕ ಕಾರಣಗಳು ಸಹಾಯಕವಾಗಿರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಮಾತ್ರ ಖರ್ಚಾಗಬೇಕಾಗುತ್ತದೆ. ಆದ್ದರಿಂದಲೇ ಡಿಸೆಂಬರ್ 92 ರವರೆಗೂ ವಾಯಿದೆಯನ್ನು ಕೊಟ್ಟಿದ್ದರೂ ಖರ್ಚಾಗದೇ ಇದ್ದುದರಿಂದ 92ನೇ ಇಸವಿ ಏಪ್ರಿಲ್ ಆಖೈರ್‌ವರೆಗೂ ಮತ್ತೆ ಟೈಮ್ ಕೊಟ್ಟರು. ಕೊಟ್ಟ ಹಣ ಖರ್ಚಾಗಲಿಲ್ಲ, ಮತ್ತೆ ನಮಗೆ ಟೈಮ್ ಕೊಡಿ ಎಂದು ನಾವು ಕೇಳಲಿಲ್ಲ. ನಮಗೆ ಆ ಬಾಬಿನಲ್ಲಿ ದುಡ್ಡು ಇನ್ನು ಹೆಚ್ಚಿಗೆ ಕೊಡುವ ಸಂದರ್ಭ ಇರಬಹುದು ಈ ಹಣ ಖರ್ಚು ಮಾಡುವುದಕ್ಕೆ ಡಿಸೆಂಬರ್ ಆಖೈರ್‌ವರೆಗೂ ಟೈಮ್ ಕೊಟ್ಟಿದ್ದಾರೆ ಎನ್ನುವ ಸ್ಪಷ್ಟ ನಿಲುವನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ನಮ್ಮದು ಕೃಷಿ ಪ್ರಧಾನವಾದಂಥ ದೇಶ. 72 ಪರ್‌ಸೆಂಟ್ ರೈತರಿದ್ದಾಗ ಕೇಂದ್ರಸರ್ಕಾರ, ವಿಶ್ವ ಬ್ಯಾಂಕು ಮತ್ತು ಐ.ಎಂ.ಎಫ್. ಒತ್ತಡಕ್ಕೆ ಮಣಿದು ಇಂಥ ಒಂದು ರೈತ ವಿರೋಧಿ ಗೊಬ್ಬರದ ನೀತಿಯನ್ನು ತಂದಿದ್ದಾರೆ. ಸರ್ಕಾರ ಸಬ್ಸಿಡಿ ಹಣವನ್ನು ರೈತರಿಗೆ ಮುಟ್ಟಿಸಿಲ್ಲ. ಇದರ ಮುಂದೆ ಏನು ಕಾರ್ಯಕ್ರಮ ಹಾಕುತ್ತೀರಿ ಎನ್ನುವುದನ್ನು ಹೇಳುವುದಿಲ್ಲ. ರೈತರ ಪರವಾಗಿ ಕೇಂದ್ರ ಸರ್ಕಾರದ ನೀತಿಯನ್ನು ಖಂಡನೆ ಮಾಡಿ ಒಂದು ರೆಸಲ್ಯೂಷನ್ ಮಾಡಿರಿ ಎಂದು ಹೇಳಿದರೂ ಮಾಡುವುದಕ್ಕೆ ತಯಾರಾಗಿಲ್ಲ. ಹಾಗಾಗಿ ನಮಗೆ ಬೇರೆ ಆಲ್‌ಟರ್‌ನೇಟಿವ್ ಇಲ್ಲ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಯನ್ನು ನಾವು ಪ್ರೊಟೆಸ್ಟ್ ಮಾಡಿ ನಾವು ವಾಕ್ ಔಟ್ ಮಾಡುತ್ತೇವೆ.

(ಈ ಹಂತದಲ್ಲಿ ಜನತಾದಳದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಕೇಳಿರತಕ್ಕಂಥದ್ದು ಏನೆಂದರೆ ರಾಜ್ಯ ಸರ್ಕಾರ ಶೇಕಡ 2ರಷ್ಟು ಟರ್ನ್ ಓವರ್ ಟ್ಯಾಕ್ಸ್ ಹಾಕಿದ್ದಾರೆ, ಸೇಲ್ಸ್ ಟ್ಯಾಕ್ಸ್ ಇದೆ, ಕೊನೆಯ ಪಕ್ಷ ಕೇಂದ್ರ ಸರ್ಕಾರದವರ ಕಡೆಗೆ ಕೈ ತೋರಿಸುವ ಬದಲಾಗಿ ತಾವೇ ಯೋಚನೆ ಮಾಡಬಹುದಲ್ಲ! ಇದನ್ನು ನಿರ್ಣಯ ಮಾಡಿದರೆ ಕನಿಷ್ಟ ಸುಮಾರು 200 ರೂಪಾಯಿಯಾದರೂ ಕಡಿಮೆಯಾಗುತ್ತದೆ. ಇದರಲ್ಲಿ ನಿಮಗೆ 10-15 ಲಕ್ಷ ರೂಪಾಯಿ ಟರ್ನ್ ಓವರ್ ಟ್ಯಾಕ್ಸ್ ಗೊಬ್ಬರದ ಮೇಲೆ